<u>**ಕರ್ನಾಟಕ ವಿಧಾನ ಪರಿಷತ್ತು**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	220(315)
ಸದಸ್ಯರ ಹೆಸರು	:	ಶ್ರೀ ಬಿ.ಎಂ.ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	17.02.2022
ಉತ್ತರಿಸುವ ಸಚಿವರು	:	ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಇತ್ತೀಚೆಗೆ ರಾಜ್ಯಾದ್ಯಂತ ಪೊಲೀಸರು ದಲಿತರು, ಕ್ರೈಸ್ತರು ಹಾಗೂ ಮುಸಲ್ಮಾನ ಸಮುದಾಯದವರುಗಳ ಮೇಲೆ ಅಮಾನುಷವಾಗಿ ವರ್ತಿಸುತ್ತಿರುವ ಹಾಗೂ ಹಲ್ಲೆ ನಡೆಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>ರಾಜ್ಯದಲ್ಲಿ ಪೊಲೀಸರು ದಲಿತರು, ಕ್ರೈಸ್ತರು ಹಾಗೂ ಮುಸಲ್ಮಾನ ಸಮುದಾಯದವರುಗಳ ಮೇಲೆ ಅಮಾನುಷವಾಗಿ ವರ್ತಿಸುತ್ತಿರುವ ಹಾಗೂ ಹಲ್ಲೆ ನಡೆಸುತ್ತಿರುವ ಕೆಲವು ಪ್ರಕರಣಗಳು ಗಮನಕ್ಕೆ ಬಂದಿರುತ್ತದೆ.</td></tr>
<tr><td>(ಆ)</td><td>ಇದುವರೆವಿಗೂ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; ಹಾಗೂ ಈ ಸಂಬಂಧದ ಪ್ರಕರಣಗಳಿಗೆ ಸಂಬಂಧಿಸಿದ ಪೊಲೀಸರ ಮೇಲೆ ಕೈಗೊಂಡ ಕ್ರಮಗಳೇನು?(ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಿಂದ ಇತ್ತೀಚಿನವರೆಗೂ 10 ಪ್ರಕರಣಗಳು ದಾಖಲಾಗಿವೆ. ವರ್ಷವಾರು ಹಾಗೂ ಜಿಲ್ಲಾವಾರು ವಿವರ ಕೆಳಗಿನಂತಿದೆ.
<table>
<tr><th rowspan="2">ಕ್ರ ಸ</th><th rowspan="2">ಘಟಕ</th><th colspan="4">ವರ್ಷ</th></tr>
<tr><th>2019</th><th>2020</th><th>2021</th><th>2022</th></tr>
<tr><td>1</td><td>ಚಿಕ್ಕಮಗಳೂರು</td><td>0</td><td>0</td><td>1</td><td>0</td></tr>
<tr><td>2</td><td>ಉಡುಪಿ</td><td>0</td><td>0</td><td>1</td><td>0</td></tr>
<tr><td>3</td><td>ಬೆಂಗಳೂರು ಜಿಲ್ಲೆ</td><td>0</td><td>1</td><td>0</td><td>0</td></tr>
<tr><td>4</td><td>ಹಾಸನ</td><td>0</td><td>2</td><td>0</td><td>0</td></tr>
<tr><td>5</td><td>ಕಲಬುರಗಿ ನಗರ</td><td>0</td><td>1</td><td>0</td><td>0</td></tr>
<tr><td>6</td><td>ವಿಜಯಪುರ</td><td>2</td><td>0</td><td>1</td><td>0</td></tr>
<tr><td>7</td><td>ಬೀದರ್</td><td>1</td><td>0</td><td>0</td><td>0</td></tr>
<tr><td></td><td>ಒಟ್ಟು</td><td>3</td><td>4</td><td>3</td><td>0</td></tr>
</table>
ಈ ಸಂಬಂಧದ ದಾಖಲಾದ 10 ಪ್ರಕರಣಗಳಲ್ಲಿ ಪೊಲೀಸರ ಮೇಲೆ ಕೈಗೊಂಡ ಕ್ರಮಗಳ ವಿವರ ಕೆಳಗಿನಂತಿದೆ.
<table>
<tr><th>ಕ್ರ ಸ</th><th>ಘಟಕ</th><th>ಪ್ರಕರಣ ಸಂಖ್ಯೆ</th><th>ಪೊಲೀಸರ ಮೇಲೆ ಕೈಗೊಂಡ ಕ್ರಮಗಳ ವಿವರ</th></tr>
<tr><td></td><td>ಚಿಕ್ಕಮಗಳೂರು</td><td>ಗೋಣೀಬೀಡು ಪೊ.ಠಾ.ಮೊ. ಸಂ 18/2021</td><td>ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಿದ್ದು, ಪಿ.ಎಸ್.ಐ. ರವರು ದಸ್ತಗಿರಿಯಾಗಿರುತ್ತಾರೆ. ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಅಲ್ಲದೇ, ಅರ್ಜುನ್ ಹೊರಕೇರಿ ಕೆ.</td></tr>
</table></td></tr>
</table>

					ಪಿ.ಎಸ್.ಐ, ಗೋಣಿಬೀಡು ಠಾಣೆ ರವರ ವಿರುದ್ಧ ಪೊಲೀಸ್ ಮಹಾನಿರೀಕ್ಷಕರು ಪಶ್ಚಿಮ ವಲಯ ಮಂಗಳೂರು ರವರ ಆದೇಶ ನಂ:ಸಿಬ್ಬಂದಿ-2/04/ಇವಿ/ ಪವ/2021 ದಿನಾಂಕ: 07/07/2021 ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಉತ್ತರ ಕನ್ನಡ ಜಿಲ್ಲೆ ರವರನ್ನು ಇಲಾಖಾ ವಿಚಾರಣಾ ಅಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ.
			ಉಡುಪಿ	ಕೋಟ ಪೊ.ಠಾ.ಮೊ. ಸಂ 214/2021	ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತರಾದ ಸಂತೋಷ್ ಬಿ.ಪಿ., ಪಿಎಸ್ಐ ಹಾಗೂ ಸಿಬ್ಬಂದಿಯವರುಗಳಾದ ರಾಮಣ್ಣ, ಅಶೋಕ್ ಶೆಟ್ಟಿ, ಮಂಜುನಾಥ ಮತ್ತು ಇತರ ಸಿಬ್ಬಂದಿರವರುಗಳನ್ನು ಕೋಟಾ ಪೊಲೀಸ್ ಠಾಣೆಯಿಂದ ವರ್ಗಾವಣೆಗೊಳಿಸಿದ್ದಲ್ಲದೇ, ಪಿಎಸ್ಐ ಅವರನ್ನು ಸೇವೆಯಿಂದ ಅಮಾನತುಗೊಳಿಸಿದ್ದು, ಪಿಎಸ್ಐ ಹಾಗೂ ಸಿಬ್ಬಂದಿರವರುಗಳ ಮೇಲೆ ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ. ಹಾಗೂ ಪ್ರಕರಣವನ್ನು ಸಿ.ಐ.ಡಿ ಬೆಂಗಳೂರು ರವರಿಗೆ ಹಸ್ತಾಂತರಿಸಲಾಗಿದೆ.
			ಬೆಂಗಳೂರು ಜಿಲ್ಲೆ	ತಿರುಮಲಶೆಟ್ಟಿ ಪೊ.ಠಾ.ಮೊ. ಸಂ 42/2020	ಪ್ರಕರಣವನ್ನು ಸಿಐಡಿ ಘಟಕ ಬೆಂಗಳೂರು ರವರಿಗೆ ತನಿಖೆಗಾಗಿ ವರ್ಗಾಯಿಸಿದ್ದು, ಸಿಐಡಿ ಘಟಕದವರು ತನಿಖೆಯನ್ನು ಪೂರೈಸಿ ಮಾನ್ಯ ನ್ಯಾಯಾಲಯಕ್ಕೆ ಸದರಿ ಪ್ರಕರಣದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಹಂತದಲ್ಲಿರುತ್ತದೆ.
			ಕಲಬುರಗಿ ನಗರ	ಸ್ಟೇಷನ್ ಬಜಾರ್ ಪೊ.ಠಾ.ಮೊ. ಸಂ 104/2020	ಶ್ರೀ ನೇಹರು ಸಿಂಗ್, ಸಿಪಿಸಿ 542 ರವರನ್ನು ದಿನಾಂಕ:25.11.2020 ರಂದು ಅಮಾನತ್ತು ಮಾಡಲಾಗಿದ್ದು, ದಿನಾಂಕ: 03.04.2021 ರಂದು ಎ.ಸಿ.ಪಿ. ದಕ್ಷಿಣ ಉಪ ವಿಭಾಗ ಕಲಬುರಗಿ ರವರಿಗೆ ಇಲಾಖೆ ವಿಚಾರಣೆಗಾಗಿ ಕಡತವನ್ನು ವಹಿಸಲಾಗಿದೆ.
			ಬೀದರ್	ಚಿಂತಾಮಣಿ ಪೊ.ಠಾ.ಮೊ. ಸಂ 32/2019	ಸಂಬಂಧಪಟ್ಟ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ.
		ಉಳಿದ 05 ಪ್ರಕರಣಗಳಲ್ಲಿ ತನಿಖೆಯನ್ನು ಪೂರೈಸಿ, "ಬಿ" ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.			

ಹೆಚ್‌ಡಿ 46 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು